ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಬೆಂಗಳೂರು

ಕ್ರಮಾಂಕ : ED 6 UMS 2003 ದಿನಾಂಕ 1-2-2005

ಇಂದ, Principal Secretary to Government
ಕಾರ್ಯದರ್ಶಿ Education Department
ಕರ್ನಾಟಕ ಸರ್ಕಾರ, ಬೆಂಗಳೂರು – ೫೬೦ ೦೦೧

ಮೈಸೂರು ವಿಶ್ವವಿದ್ಯಾನಿಲಯ
ಮೈ. ವಿ. ವಿ., ಮೈಸೂರು
ಒ. ಸಂ. A 406
ದಿ. 14/2/05

ಇವರಿಗೆ,

The Registrar,
University of Mysore
MYSORE - 570 005

Sir,

Sub: Amendment Statute relating to Institution of Sri Gubbi Veeranna Chair in Mysore University.

Ref: Your letter No.DV7/754/82-83 dated 2.11.2004

:0:

I am directed to convey the approval of the Chancellor dated 22-1-12005 to the Amendment Statute relating to Institution of Sri Gubbi Veeranna Chair in Mysore University (copy enclosed) under Section 41(6) of the KSU Act, 2000.

Yours faithfully,

(SUNDARA RAJA GUPTHA)
Under Secretary to Government
Education Department(University)

ಮೈಸೂರು ವಿಶ್ವವಿದ್ಯಾನಿಲಯ

ಕುವೆಂಪು ಜನ್ಮ ಶತಮಾನೋತ್ಸವ ವರ್ಷ-2004

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ: 22-02-2005

ಡಿಪಿ/754/82-83

## ಪ್ರಕಟಣೆ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಗುಬ್ಬಿವೀರಣ್ಣ ರಂಗ ಪೀಠದ ಅಧಿನಿಯಮವನ್ನು ಮಾರ್ಪಡಿಸಿ ಕಳುಹಿಸಿದ್ದ ಅಧಿನಿಯಮಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 41 (6)ರ ಪ್ರಕಾರ ಕುಲಾಧಿಪತಿಗಳು ಅಂಕಿತ ನೀಡಿರುವುದನ್ನು, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ತಮ್ಮ ಪತ್ರ ಸಂಖ್ಯೆ ಇಡಿ 6 ಯುಎಂಎಸ್ 2003 ದಿನಾಂಕ 01-02-2005ರ ಮೂಲಕ ತಿಳಿಸಿರುತ್ತಾರೆ. ಸದರಿ ತಿದ್ದುಪಡಿ ಅಧಿನಿಯಮವನ್ನು ಈ ಮೂಲಕ ಪ್ರಕಟಿಸಲಾಗಿದೆ.

ಅಂಗೀಕಾರವಾದ ತಿದ್ದುಪಡಿ ಅಧಿನಿಯಮವನ್ನು ಈ ಪ್ರಕಟಣೆಯ ಜೊತೆಯಲ್ಲಿ ಲಗತ್ತಿಸಿದೆ.

ಕುಲಸಚಿವರು

ಗೆ:

1. ಕುಲಾಧಿಪತಿಗಳ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
2. ಕರ್ನಾಟಕ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು (ವಿಶ್ವವಿದ್ಯಾನಿಲಯ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳಿಗೆ, ಮಾನಸಗಂಗೋತ್ರಿ, ಮೈಸೂರು.
4. ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
5. ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸರ್ಕಾರಿ ಲೆಕ್ಕಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಉಪಕುಲಸಚಿವರು (ಶೈಕ್ಷಣಿಕ/ಸಾಮಾನ್ಯ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಸಹಾಯಕ ಕುಲಸಚಿವರು (ಶೈಕ್ಷಣಿಕ/ಸಾಮಾನ್ಯ/ಸಿಂಡಿಕೇಟ್), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಅಧೀಕ್ಷಕರು (ಶೈಕ್ಷಣಿಕ/ಸಾಮಾನ್ಯ/ಸಿಂಡಿಕೇಟ್), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಕಾರ್ಯನಿರ್ವಾಹಕರು, ಹಣಕಾಸು ವಿಭಾಗ, ಮೈಸೂರು ವಿದ್ಯಾನಿಲಯ. ಮೈಸೂರು.
13. ಕಡತಕ್ಕೆ.

1976ರ ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆಯ ಸೆಕ್ಷನ್ 35 (ಟ) ವ್ಯಾಪ್ತಿಯಲ್ಲಿ ಗುಬ್ಬಿ ವೀರಣ್ಣ ರಂಗ ಪೀಠ ಸ್ಥಾಪನೆಯ ಬಗ್ಗೆ ಅಧಿನಿಯಮಗಳು.

# Amendment to IV (2) of the Statute relating to Sri Gubbi Veeranna Chair.

These statutes shall be called Amendment Statute relating to *Sri Gubbi Veeranna Chair (2004)*

I ಶಿರೋನಾಮ ಮತ್ತು ಪ್ರಾರಂಭ :

1) ಈ ಅಧಿನಿಯಮಗಳನ್ನು ಶ್ರೀ ಗುಬ್ಬಿ ವೀರಣ್ಣ ರಂಗ ಪೀಠ (1985) ಅಧಿನಿಯಮಗಳು ಎಂದು ಕರೆಯತಕ್ಕದ್ದು.

2) ಈ ಅಧಿನಿಯಮಗಳು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳ ಮನ್ನಣೆ ಪಡೆದ ದಿನದಿಂದ ಜಾರಿಗೆ ಬರತಕ್ಕದ್ದು.

II ಉದ್ದೇಶ :

ಕರ್ನಾಟಕದ ಹಿರಿಮೆ, ಸಂಸ್ಕೃತಿ ಹಾಗೂ ಗೌರವವನ್ನು ರಂಗಭೂಮಿಯ ಮೂಲಕ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ದಿವಂಗತ ಶ್ರೀ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ಗುಬ್ಬಿ ಕಂಪನಿಯ ಶತಮಾನೋತ್ಸವ ಸಂದರ್ಭದಲ್ಲಿ ಈ ಪೀಠವನ್ನು ಸ್ಥಾಪಿಸಲಾಗಿದೆ.

III ಕಾರ್ಯಚಟುವಟಿಕೆಗಳು ಮತ್ತು ನಿಬಂಧನೆಗಳು :

1) ರಂಗಭೂಮಿಯ ಯಾವುದೇ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ ರಂಗ ತಜ್ಞರನ್ನು ಪೀಠಕ್ಕೆ ಆಹ್ವಾನಿಸುವುದು.

2) ವರ್ಷದ ಅವಧಿಯಲ್ಲಿ ಒಬ್ಬರು, ಇಬ್ಬರು, ಮೂವರು ರಂಗ ತಜ್ಞರನ್ನು ಪ್ರತಿ ವರ್ಷವೂ ಮೂರು ತಿಂಗಳ ಅವಧಿಗೆ ಒಬ್ಬರಂತೆ ಹಣದ ಅನುಕೂಲಕ್ಕೆ ತಕ್ಕಂತೆ ಲಲಿತ ಕಲಾ ಕಾಲೇಜು ಸೂಚಿಸುವವರನ್ನು ಭಾರತದ ಯಾವುದೇ ಭಾಗದಿಂದ ವಿಶ್ವವಿದ್ಯಾನಿಲಯವು ಆಹ್ವಾನಿಸುವುದು.

3) ರಂಗತಜ್ಞರು ಲಲಿತ ಕಲಾ ಕಾಲೇಜಿನಲ್ಲಿದ್ದು ನಾಟಕ ರಚನೆ, ನಾಟಕ ಪ್ರಯೋಗ, ಕಮ್ಮಟ ಕಾರ್ಯಾಗಾರ, ಶಿಬಿರ, ಸಂಶೋಧನೆ, ಅನುವಾದ, ಉಪನ್ಯಾಸ ಮೊದಲಾದ ರಂಗಭೂಮಿಗೆ ಸಂಬಂಧಿಸಿದ ಯಾವುದೇ ಕೆಲಸವನ್ನು ನಿರ್ವಹಿಸತಕ್ಕದ್ದು. ಪ್ರಯೋಗ, ಪ್ರದರ್ಶನ, ಕಮ್ಮಟ, ಶಿಬಿರ, ಕಾರ್ಯಾಗಾರ, ಕ್ಷೇತ್ರಗಳನ್ನು ಬಿಟ್ಟು ಉಳಿದಂತೆ ತಾವು ಈ ಅವಧಿಯಲ್ಲಿ ಮಾಡಿದ ಕೆಲಸದ ಹಸ್ತಪ್ರತಿಯನ್ನು ಅವಧಿಯ ಕೊನೆಯಲ್ಲಿ ಕಾಲೇಜಿಗೆ ಕೊಡತಕ್ಕದ್ದು. ಹಸ್ತಪ್ರತಿಯನ್ನು ಪೀಠದ ಮೂಲಧನದ ಬಡ್ಡಿಯಿಂದ ವಿಶ್ವವಿದ್ಯಾನಿಲಯವು ಪ್ರಕಟಿಸಿದಾಗ ವಿಶ್ವವಿದ್ಯಾನಿಲಯ ತನ್ನ ನಿಯಮದಂತೆ ರಂಗತಜ್ಞರ ಗೌರವಧನವನ್ನು ಕೊಡತಕ್ಕದ್ದು.

4) ರಂಗತಜ್ಞರು ಇಲ್ಲಿರುವ ಅವಧಿಯಲ್ಲಿ ಅವರಿಗೆ ಉಚಿತ ವಸತಿಯನ್ನು ಕಲ್ಪಿಸುವುದು.

IV ಈ ದತ್ತಿಯ ಹಣವನ್ನು (5 ಲಕ್ಷ ರೂಪಾಯಿಗಳು) ಪ್ರತ್ಯೇಕವಾಗಿಟ್ಟು ಅದರಿಂದ ಬರುವ ಬಡ್ಡಿಯಿಂದ ಈ ಕೆಳಕಂಡ ವೆಚ್ಚಗಳನ್ನು ಮಾಡಲಾಗುವುದು.

1) ಸಂದರ್ಶಕ ಪ್ರಾಧ್ಯಾಪಕರು ಕೆಲಸದ ಮೇಲೆ ಪ್ರವಾಸ ಮಾಡಬೇಕಾದ್ದ ಸಂದರ್ಭದಲ್ಲಿ ಮತ್ತು ಕೆಲಸದಿಂದ

ನಿಯುಗತಿಯಾದಾಗ ಅವರ ಸ್ವಂತ ಊರಿಗೆ ಹಿಂತಿರುಗಲು ಪ್ರಯಾಣ ಭತ್ಯೆ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.

2) ಸಂದರ್ಶಕ ಪ್ರಾಧ್ಯಾಪಕರು ತಿಂಗಳಿಗೆ 3000-00 ರೂಪಾಯಿಗಳ ಗೌರವಧನವನ್ನು ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಉಚಿತ ವಸತಿ ಸೌಕರ್ಯಕ್ಕೂ ಕೂಡ ಅರ್ಹರಾಗಿರುತ್ತಾರೆ.

3) ಕಾರ್ಯಾಗಾರ, ಕಮ್ಮಟ ಶಿಬಿರ ನಿರ್ವಹಣೆ, ಪ್ರಯೋಗ ವೆಚ್ಚ, ಪ್ರಕಟಣೆ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ವೆಚ್ಚಗಳನ್ನು ಸಹ ಈ ಪೀಠದ ಮೂಲ ನಿಧಿಯಿಂದ ಬರುವ ಬಡ್ಡಿಯ ಹಣದಿಂದ ಭರಿಸತಕ್ಕದ್ದು.

ಈ ಎಲ್ಲಾ ಖರ್ಚುಗಳನ್ನು ಮಾಡಿದ ನಂತರ ಬಡ್ಡಿ ಹಣ ಉಳಿದಲ್ಲಿ ಅದನ್ನು ಮೂಲಧನಕ್ಕೆ ಸೇರಿಸಿಕೊಳ್ಳತಕ್ಕದ್ದು.